(*d*) Orders have already been issued to the local Tahasildar concerned to take steps to evict the encroachers from the land according to law.

ಶ್ರೀ ಹಂಜಿ ಶಿವಣ್ಣ.—ನನ್ನ ಪ್ರಶ್ನೆಯ ಕೆಲವು ಭಾಗವನ್ನು ಒಪ್ಪಿಕೊಂಡಿದ್ದೀರಿ, ಈಗ ಸ್ಕೂಲಿಗೆ ಸೇರಿದ ನ್ಯಳವನ್ನು ಕೆಲವು ಪುಡಾರಿಗಳು ಒತ್ತುವರಿಮಾಡಿಕೊಂಡು ಸ್ಕೂಲು ಕಟ್ಟಿಸಲಿಕ್ಕೆ ಬಿಂದಂಥ ಜನಗಳಿಗೆ ತೊಂದರೆ ಮಾಡುತ್ತಿದ್ದಾರೆ. ಉತ್ತರದಲ್ಲಿ ಇದರ ಬಗ್ಗೆ ತಹಸೀಲ್ದಾರರಿಗೆ ತಿಳಿಸಿದ್ದೇವೆ ಎಂದು ಹೇಳಿದ್ದೀರಿ, ಆ ರೀತಿ ತಿಳಿಸಿ ಎಷ್ಟು ದಿವಸವಾಯಿತು ? ಆ ಸ್ಕೂಲನ್ನು ಕಟ್ಟಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಎ. ಆರ್. ಬದರೀನಾರಾಯಣ.—ಎವಿಕ್ಷನ್ ಮಾಡಿಸಿ ಕಟ್ಟಡ ಕಟ್ಟುವುದಕ್ಕೆ ಅನುಕೂಲ ಮಾಡಿಕೊಡಬೇಕು ಎಂದು ಡೆಪ್ಯೂಟಿ ಕಮಿಷನರ್ ಅವರಿಗೆ ಬರೆದಿದ್ದೇವೆ.

ಶ್ರೀ ಹಂಜಿ ಶಿವಣ್ಣ.—ಬಹಳ ವರ್ಷಗಳಿಂದ ಇದುವರೆಗೂ ವತ್ತುವರಿಮಾಡಿಕೊಂಡು ಹೋಗಿದ್ದುದನ್ನು ತಮ್ಮಗಮನಕ್ಕೆ ತಂದಿದ್ದೇವೆ, ಕೂಡಲೇ ಕ್ರಮ ತೆಗೆದುಕೊಳ್ಳುವುದಕ್ಕೆ ಡೆಪ್ಯೂಟಿ ಕಮಿಷನರ್ ಅವರಿಗೆ ಆದೇಶ ಕೊಡುತ್ತೀರಾ ?

ಶ್ರೀ ಎ ಆರ್. ಬದರೀನಾರಾಯಣ.—ಅದನ್ನು ಆದಷ್ಟು ಬೇಗ ಮಾಡುತ್ತೇನೆ.

ಶ್ರೀ ಎಂ. ಬಿ. ರಾಮಸ್ವಾಮಿ —ತಾವು ಡಿ ನಲ್ಲಿ ಸಂಬಂಧಪಟ್ಟ ತಹಸೀಲ್ದಾರ್ ಅವರಿಗೆ ಆಜ್ಞೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ, ತಾವು ಎಂದು ಅವರಿಗೆ ತಿಳಿಸಿದಿರಿ ?

ಶ್ರೀ ಎ. ಆರ್. ಬದರೀನಾರಾಯಣ.—ತಹಸೀಲ್ದಾರ್ ಅವರು ಡೆಪ್ಯೂಟಿ ಕಮಿಷನರ್ ಅವರಿಗೆ ಬರೆದು, ಎವಿಕ್ಷನ್ ಆಕ್ಟ್ ಇರಲಿಲ್ಲವೆಂದು ಹೇಳಿದ್ದಾರೆ. ಆ ಪತ್ರಕ್ಕೆ ಉತ್ತರ ಸ್ವಲ್ಪ ವಿಳಂಬವಾಯಿತು. ಅದ್ದರಿಂದ ಆ ಆಕ್ಟ್ ಎಲ್ಲಾ ನಮ್ಮಲ್ಲಿ ಮಾಡಿಸಿ ಎವಿಕ್ಷನ್ ಮಾಡುವುದಕ್ಕೆ ಪ್ರಯತ್ನ ಮಾಡಿದೆ.

P. U. C. Text Books

469. Sri D. B KALMANKAR (Afzalpur).—

Will the Minister for Education be pleased to state.—

whether the P. U. C. Text Books in different languages for which different Committees were appointed last year are ready and available in market ?

Sri A. R. BADARINARAYANA (Minister for Education).—

Yes. Out of 8 Committees appointed last year, books prepared by 4 Committees *viz.*, English, Kannada, Sanskrit and Hindi Committees are ready and available in the market.

Sri D. B. KALMANKAR.—It is stated that out of 8 committees, four committees have prepared books. May I know which are the other four committees that have not prepared the books ?

† Sri A. R. BADARINARAYANA.—They are Telugu, Tamil, Marathi and Urdu Committees.

Sri D .B. KALMANKAR.—If that is so, what is the fate of students who are studying in those media and whether the Government will see that those committees prepare books intime so that the students may not suffer ?

Sri A. R. BADARINARAYANA.—Manuscripts of those eight languages are ready. In so far as Telugu, Tamil, Marathi and Urdu are concerned, they have been entrusted to private agencies and they have been asked to supply books.

ಶ್ರೀ ಎಂ. ಬಿ. ರಾಮಕೃಷ್ಣಯ್ಯ.—8 ಕಮಿಟಿಗಳಿವೆ ಎಂದು ಹೇಳಿದ್ದಾರೆ. ಈ ಕಮಿಟಿಗಳಲ್ಲಿರುವ ಸದಸ್ಯರು ಅವರಿಗೆ ಯಾರು ಯಾರು ಬೇಕೋ ಅಂಥವರು ಬರೆದ ಪುಸ್ತಕಗಳನ್ನು ತೆಗೆದುಕೊಂಡು ಅವರಿಗೆ ಸಹಾಯ ಮಾಡುತ್ತಿದ್ದಾರೆ. ಯಾರು ಒಳ್ಳೆಯ ಸಾಹಿತಿಗಳಿರುತ್ತಾರೆ ಅಂಥವರು ಬರೆದ ಪುಸ್ತಕಗಳಿಗೆ ಇನ್ನು ಮೇಲಾದರೂ ಪ್ರಾಶಸ್ತ್ಯವನ್ನು ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಎ. ಆರ್. ಬದರೀನಾರಾಯಣ.—ಬೇಕು ಬೇಕಾದವರಿಗೆ ಕೊಟ್ಟಿದ್ದಾರೆಂದು ಜನರ ಲೈಸ್ ಮಾಡಿದ್ದಾರೆ ಆಗುವುದಿಲ್ಲ. ಇಂಥ ಕತೆ ಈ ರೀತಿ ನಡೆದಿದೆ ಎಂದು ತಿಳಿಸಿದರೆ ಆದರ ಬಗ್ಗೆ ನೋಡಿಸಬಹುದು.

ಶ್ರೀ ಎಂ. ಎಸ್. ಕೃಷ್ಣನ್.—ಮರಾಠಿ, ತೆಲುಗು, ತಮಿಳು, ಉರ್ದು ಈ ಭಾಷೆಗಳಿಗೆ ವಿರೋಧ ಇರುವವರನ್ನು ನಾಲ್ಕೂ ಕಮಿಟಿಗಳಲ್ಲಿ ಹಾಕಿರುವುದರಿಂದ ಅವರು ಕೆಲಸ ಮಾಡುತ್ತಿಲ್ಲ ಎನ್ನುವ ದೂರು ಬಂದಿದೆ. ಅದರ ಬಗ್ಗೆ ಏನು ಯೋಚನೆ ಮಾಡಿದ್ದೀರಿ?

ಶ್ರೀ ಎ. ಆರ್. ಬದರೀನಾರಾಯಣ.—ಮಾನ್ಯ ಸದಸ್ಯರು ಈಗ ಹೇಳಿರುವುದರಿಂದ ಆವರಲ್ಲಿ ಆ ಭಾಷೆಯನ್ನು ವಿರೋಧಿಸುವವರು ಇದ್ದಾರೆಯೇ ಎನ್ನುವುದನ್ನು ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೋಣಂದೂರು ಲಿಂಗಪ್ಪ.—ಟೆಕ್ಸ್ಟ್ ಬುಕ್ ಕಮಿಟಿಗಳ ಬಗ್ಗೆ ಬಹಳ ದೊಡ್ಡ ಭ್ರಷ್ಟಾಚಾರ ಆರೋಪ ಬಂದಿರುವುದೂ, ಇರುವುದೂ, ತಮಗೆ ಗೊತ್ತಿದೆಯೇ? ಅದು ದೊಡ್ಡ ರ್ಯಾಕೆಟ್ಟ್ ಆಗಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ.ಆರ್. ಬದರೀನಾರಾಯಣ.—ರ್ಯಾಕೆಟ್ ಆಗಿದೆ ಎನ್ನತಕ್ಕದ್ದು ನನಗೆ ಲಿಖಿತಮೂಲಕವಾಗಲೀ, ಬಾಯಿ ಮಾತಿನಲ್ಲಿ ಆಗಲೀ ಯಾರೂ ತಿಳಿಸಿಲ್ಲ. ಈಗ ಮಾನ್ಯ ಸದಸ್ಯರು ಹೇಳಿದ್ದಾರೆ, ಅದನ್ನು ಗಮನಿಸುತ್ತೇನೆ.

ಶ್ರೀ ಎಸ್. ಹಮೀದ್ ಷಾ.—ಈ ಕಮಿಟಿಯಲ್ಲಿರುವ ಸದಸ್ಯರು ಯಾರು ಎಂದು ಹೇಳುವುದಕ್ಕೆ ಸಾಧ್ಯವೇ?

ಶ್ರೀ ಎ. ಆರ್. ಬದರೀನಾರಾಯಣ.—ಸದಸ್ಯರ ಹೆಸರುಗಳು ಈಗ ನನ್ನಲ್ಲಿಲ್ಲ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.—ಟೆಕ್ಸ್ಟ್ ಬುಕ್ ಕಮಿಟಿಗೆ ಸದಸ್ಯರನ್ನು ಆಯ್ಕೆ ಮಾಡುವಾಗ ಯಾವ ನಿರ್ದಿಷ್ಟವಾದ ನೀತಿಯನ್ನು ಅನುಸರಿಸುತ್ತೀರಿ, ಸ್ವಾಮಿ?

Sri A. R. BADARINARAYANA.—They are all well known members. We consult various associations and then appoint.

ಶ್ರೀ ಎಂ. ಎಚ್. ಜಯಪ್ರಕಾಶ ನಾರಾಯಣ್.—ಈ 8 ಸಮಿತಿಗಳಲ್ಲಿ ಒಂದು ಗೊತ್ತಾದ ಜಾತಿಯನ್ನು ಹೆಚ್ಚಾಗಿ ನೇಮಿಸಿಕೊಂಡಿದ್ದಾರೆ. ಇದಕ್ಕೆ ಮೂಲ ಕಾರಣವೇನು? ಅರ್ಹತೆ ಇದ್ದರೆ ಎಲ್ಲ ವರ್ಗಗಳಿಗೂ ಪ್ರಾತಿನಿಧ್ಯ ಕೊಡುವುದಕ್ಕೆ ಪ್ರಯತ್ನ ಮಾಡುತ್ತೀರಾ?

Sri A. R. BADARINARAYANA.—These committees were constituted two years back. ಯಾವ ಯಾವ ಜಾತಿಯವರಿದ್ದಾರೆ ಎನ್ನುವುದನ್ನು ಬೇಕಾದರೆ ಪರಿಶೀಲನೆ ಮಾಡಿಸುತ್ತೇನೆ.

ಶ್ರೀ ಕೊಣಂದೂರು ಲಿಂಗಪ್ಪ.—ಸಂಗೀತ, ಸಾಹಿತ್ಯ ಇಂಥ ಕ್ಷೇತ್ರಗಳಲ್ಲಿಯೂ ಕೂಡ ಯೋಗ್ಯತೆ ಇರುವವರಿಗೆ ಸ್ಥಾನ, ಜಾತಿಗೆ ಸ್ಥಾನವಿಲ್ಲ ಎನ್ನುವ ತತ್ವವನ್ನು, ಮಾತನ್ನು ಮಾನ್ಯ ಮಂತ್ರಿಗಳು ಒಪ್ಪುತ್ತಾರೆಯೇ, ಸ್ವಾಮಿ?

ಶ್ರೀ ಎ. ಆರ್. ಬದರೀನಾರಾಯಣ.—ಖಂಡಿತವಾಗಿ. ಅದಕ್ಕಿಂತ ಇನ್ನು ಸರಿಯಾದ ತತ್ವ ಬೇರೆ ಇಲ್ಲ.

Sri D. B. KALMANKAR.—May I know whether the Government will hereafter at least take prompt action to see that the books are prepared before the commencement of the academic year ?

Sri A. R. BADARINARAYANA.—As the hon. member knows the Pre-University Board was constituted in the year 1971. This is a new experience and there has been some difficulty in the formation of these committees and preparation of text books. But I can assure that very soon the work will be got done.

MADAM SPEAKER.—Now Question hour is over.

V, 31 N73
N74-104
(2) 4895

QUESTIONS AND ANSWERS ON THE DAY (but not taken up)

Dispensary at Makapur Village in Lingasugur Taluk

44. Sri SHARANAPPA (Deodurg).—

Will the Minister for Health be pleased to state :—

(*a*) whether the Taluk Development Board, Lingasugur has proposed to set up one H. U. T. Dispensary at Makapur village in Lingasugur Taluk, Raichur District ;

(*b*) whether it is not a fact that all the formalities have been completed by the said Board long back ;

(*c*) whether it is not a fact that Government is very anxious to provide medical facilities to the rural area ;

(*d*) if so, the reasons for keeping this proposal pending since 2 or 3 years ?

Sri H. SIDDAVEERAPPA (Minister for Health).—

(*a*) Yes.

(*b*) Yes.

(*c*) Yes.

(*d*) Orders sanctioning a H.U.T. Dispensary at Makapur have been issued in G. O. No. HMA 22 PPS 71. dated 5-2-1973.

Appointment to the Posts of District and Civil Judges and Munsiffs

100. Sri K. SIDDIAH (Santhemarahalli).—

Will the Minister for Law and Parliamentary Affairs be pleased to state :—

(*a*) the number of appointments made to the posts of (1) District Judges, (2) Civil Judges and (3) Munsiffs during 1970 to 1972 if any, in Judicial Department ;